<table>
<tr><td colspan="4">ಕರ್ನಾಟಕ ಸರ್ಕಾರ<br>(ಸಿ.ಆರ್.ಪಿ-67)</td></tr>
<tr><td rowspan="4">ಹೇಳಿಕೆ ಹಾಳೆ (ಆರ್.ಸಿ. ಸಂಖ್ಯೆ 57) ನಮೂನೆ ಸಂಖ್ಯೆ 4</td><td colspan="3">ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಚನ್ನಪಟ್ಟಣ</td></tr>
<tr><td colspan="3">ಸಿ.ಸಿ ನಂ. 4609/2022</td></tr>
<tr><td></td><td>ಸಿ.ಡಬ್ಲೂ</td><td>1</td></tr>
<tr><td></td><td>ಪಿ.ಡಬ್ಲೂ</td><td>3</td></tr>
<tr><td>ಸಾಕ್ಷಿದಾರರ ಹೆಸರು</td><td colspan="3">ಲಿಯಾಕತ್ ಉಲ್ಲಾ ಬಿನ್ ಸಮೀವುಲ್ಲಾ</td></tr>
<tr><td>ವಯಸ್ಸು</td><td colspan="3">40 ವರ್ಷ</td></tr>
<tr><td>ಉದ್ಯೋಗ</td><td colspan="3">ಪಿ.ಎಸ್.ಐ, ಚನ್ನಪಟ್ಟಣ ಗ್ರಾಮಾಂತರ ಪೊಲೀಸ್ ಠಾಣೆ</td></tr>
<tr><td>ವಾಸಸ್ಥಳ</td><td colspan="3">ಚನ್ನಪಟ್ಟಣ</td></tr>
</table>

ದಿನಾಂಕಃ **17.03.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

**1)** ನಾನು ದಿ**. 10.10.2013** ರಿಂದ ದಿ**. 15.06.2017** ರವರೆಗೆ ಚನ್ನಪಟ್ಟಣ ಪೂರ್ವ ಪೋಲಿಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ಮಾಡಿರುತ್ತೇನೆ.

**2)** ದಿ**. 05.03.2022** ರಂದು ನಾನು**,** ಚಾಸಾ**-8** ಮತ್ತು **9** ರವರ ಜೊತೆ ಗಸ್ತು ಕರ್ತವ್ಯದಲ್ಲಿ ಇದ್ದಾಗ ದಿಃ**06.03.2022** ರಂದು ಬೆಳಗಿನ ಜಾವ **04** ಗಂಟೆ ಸಮಯದಲ್ಲಿ ಬೆಂಗಳೂರು ಕಡೆಯಿಂದ ಮೈಸೂರು ಕಡೆಗೆ ಟಾಟಾ ಗೂಡ್ಸ ವಾಹನದಲ್ಲಿ ಅಕ್ರಮವಾಗಿ ಪಡಿತರ ಚೀಟಿಯಡಿ ನೀಡುವ ಅಕ್ಕಿಯನ್ನು ಸಾಗಾಟ ಮಾಡುತ್ತಿರುವುದಾಗಿ ಮಾಹಿತಿ ಬಂದಿತ್ತು. ನಂತರ ನಾವು **04.30** ರ ಸಮಯಕ್ಕೆ ಚಿಕ್ಕಮಳೂರು ಗ್ರಾಮದ ಹೆಚ್.ಪಿ ಪೆಟ್ರೋಲ್ ಬಂಕ್ ಬಳಿ ಚಾಸಾ**-2** ರಿಂದ **4** ರವರನ್ನು ಕರೆಯಿಸಿ ಪಂಚರಾಗುವಂತೆ ಕೋರಿ ನೋಟೀಸ್ ನೀಡಿ ಅವರನ್ನು ನಮ್ಮ ಜೊತೆ ಕರೆದುಕೊಂಡು ಸ್ಥಳಕ್ಕೆ **04.45** ರ ಸಮಯಕ್ಕೆ ಹೋಗಿ ಕಾಯುತ್ತಿದ್ದಾಗ**,** ಅದೇ ದಿನ ಬೆಳಿಗ್ಗೇ **05.30** ರ ಸಮಯದಲ್ಲಿ ಬೆಂಗಳೂರು ಕಡೆಯಿಂದ ಮೈಸೂರು ಕಡೆಗೆ ಟಾಟಾ ಗೂಡ್ಸ ವಾಹನ ಸಂಖ್ಯೇ ಕೆಎ **41** ಎ **5236** ವಾಹನ ಬಂದಿದ್ದು ಅದನ್ನು ನಿಲ್ಲಿಸಿದಾಗ ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿ ಒಬ್ಬ ವ್ಯಕ್ತಿ ಓಡಿ ಹೋದನು. ಚಾಲಕನ ಸೀಟಿನಲ್ಲಿ ಇದ್ದ ಮತ್ತೊಬ್ಬ ವ್ಯಕ್ತಿಯನ್ನು ಹಿಡಿದು ವಿಚಾರ ಮಾಡಲಾಗಿ ಆತ ತನ್ನ ಹೆಸರು ಕುಮಾರ ಬಿನ್ ತಿಮ್ಮಶೆಟ್ಟಿ ಎಂದು ತಿಳಿಸಿದ್ದನು. ಓಡಿ ಹೋದವರ ಹೆಸರು ಕೇಳಲಾಗಿ ಯೋಗಾನಂದ**,** ಲಾಳಘಟ್ಟ ಗ್ರಾಮ ಎಂದು ತಿಳಿದುಬಂದಿತ್ತು. ನಾವು ವಾಹನವನ್ನು ಪರಿಶೀಲನೆ ಮಾಡಲಾಗಿ ಅದರಲ್ಲಿ ಅಕ್ಕಿ ಮೂಟೆಗಳು ಇದ್ದು**,** ಅವು ಪಡಿತರ ಚೀಟಿ ಮೇರೆಗೆ ನೀಡುವ ಅಕ್ಕಿಯಾಗಿದ್ದು ಚೀಲ ಬದಲಿಸಿ ಬಿಳಿ ಚೀಲದಲ್ಲಿ ಹಾಕಿ ಸಾಗಾಟ ಮಾಡುತ್ತಿರುವುದಾಗಿ ತಿಳಿದು ಬಂದಿತ್ತು. ಸದರಿ ಅಕ್ಕಿಯನ್ನು ಚನ್ನಪಟ್ಟಣ ಟೌನ್ ಮಂಡೀಪೇಟೆ ವಾಸಿಗಳಾದ **1** ರಿಂದ **3** ನೇ ಆರೋಪಿತರು ಮತ್ತು ಇತರರಿಗೆ

ಕಳುಹಿಸುತ್ತಿರುವುದಾಗಿ ನಮಗೆ ತಿಳಿಸಿದ್ದರು. ಸಿಕ್ಕ ವಸ್ತುಗಳನ್ನು ಪಂಚರ ಸಮಕ್ಷಮ ಪಂಚನಾಮೆಯಡಿ ಬೆಳಿಗ್ಗೆ **06** ರಿಂದ **07.15** ರ ಸಮಯದಲ್ಲಿ ಜಪ್ತುಪಡಿಸಿಕೊಂಡೆನು. ಒಟ್ಟು **57** ಮೂಟೆಗಳನ್ನು ಜಪ್ತುಪಡಿಸಿದ್ದೆನು. ಸಿಕ್ಕ ವಾಹನ ಮತ್ತು ಕುಮಾರ್ ಎಂಬ ವ್ಯಕ್ತಿಯನ್ನು ಕರೆದುಕೊಂಡು ಠಾಣೆಗೆ ಹೋಗಿ ಚಾಸಾ-**11** ರವರ ಸಮಕ್ಷಮ ಹಾಜರುಪಡಿಸಿದ್ದೆನು. ನಂತರ ಸರ್ಕಾರದ ಪರವಾಗಿ ನಾನೇ ದೂರು ದಾಖಲು ಮಾಡಿರುತ್ತೇನೆ.

**3)** ದೂರು ಮತ್ತು ಅದರ ಮೇಲಿರುವ ತನ್ನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ದೂರನ್ನು ನಿಪಿಃ **2** ಎಂದು, ಸಾಕ್ಷಿಯ ಸಹಿಯನ್ನು ನಿಪಿಃ **2**(ಎ) ಎಂದು ಗುರುತಿಸಲಾಯಿತು. ಸ್ಥಳದಲ್ಲಿ ಕುಮಾರ್ ರವರಿಗೆ ಅಕ್ಕಿಯನ್ನು ಸಾಗಾಟ ಮಾಡಲು ಪರವಾನಿಗೆ ಇದೆಯೇ ಎಂದು ವಿಚಾರ ಮಾಡಿದ್ದು ಆತ ಯಾವುದೇ ಪರವಾನಗಿ ಇಲ್ಲ ಎಂದು ತಿಳಿಸಿದ್ದರು. ಕುಮಾರ್ ರವರನ್ನು ನೋಡಿದರೆ ಗುರುತಿಸುತ್ತೇನೆ.

**ಮರುವಿಚಾರಣೆ ಇಲ್ಲ.**

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಂ.ಕೆ.ಎನ್. ವಕೀಲರಿಂದ</u>**

**1)** ಠಾಣಾ ದಿನಚರಿಯಲ್ಲಿ ದಿಃ**05.03.2022** ರಂದು ಮತ್ತು **06.03.2022** ರಂದು ಎಲ್ಲಿ ಎಲ್ಲಿ ಕರ್ತವ್ಯ ಮಾಡಿದ್ದೆ ಎಂಬ ಬಗ್ಗೆ ಉಲ್ಲೇಖ ಮಾಡಿದ್ದೇನೆ. ಅದರಂತೆ ನಮ್ಮ ಸಿಬ್ಬಂದಿಗಳನ್ನೂ ಸಹ ಯಾವ ಯಾವ ಕರ್ತವ್ಯಕ್ಕೆ ನೇಮಕ ಮಾಡಲಾಗಿತ್ತು ಎಂಬ ಬಗ್ಗೆ ಉಲ್ಲೇಖಿಸಲಾಗಿದೆ. ಸದರಿ ದಾಖಲೆಯನ್ನು ಚಾಸಾ-**11** ರವರಿಗೆ ನಾನು ನೀಡಿರುವುದಿಲ್ಲ. ಟಾಟಾ **407** ಗೂಡ್ಸ ವಾಹನ ಚನ್ನಪಟ್ಟಣದ ಮಂಡಿಪೇಟೆಯಿಂದ ಬೆಳಿಗ್ಗೆ **04** ಗಂಟೆಗೆ ಹೊರಟರೆ ಚನ್ನಪಟ್ಟಣದ ಚಿಕ್ಕಮಳೂರು ಗ್ರಾಮಕ್ಕೆ ತಲುಪಲು ಅಂದಾಜು **10** ರಿಂದ **15** ನಿಮಿಷಗಳು ಬೇಕಾಗುತ್ತದೆ. ಭೈರಾಪಟ್ಟಣ ಗ್ರಾಮದಿಂದ ಚಿಕ್ಕಮಳೂರು ಗ್ರಾಮಕ್ಕೆ **10** ನಿಮಿಷಗಳ ಅವಧಿಯಲ್ಲಿ ತಲುಪಬಹುದು.

**2)** ಪಂಚರು ಯಾರೂ ಸಹ ಚಿಕ್ಕಮಳೂರು ಗ್ರಾಮಸ್ಥರು ಆಗಿರುವುದಿಲ್ಲ ಎಂದರೆ ಸರಿ. ನೋಟೀಸ್ ಪ್ರತಿಗಳನ್ನು ತನಿಖಾಧಿಕಾರಿಗೆ ನೀಡಿದ್ದೆನು. ಸ್ಥಳದಿಂದ ಓಡಿ ಹೋದ ವ್ಯಕ್ತಿಯ ಚಹರೆಯ ಬಗ್ಗೆ ನಿಪಿ.**2** ರಲ್ಲಿ ನಮೂದು ಮಾಡಿರುವುದಿಲ್ಲ. ಅಕ್ಕಿ ಪಡಿತರ ಚೀಟಿ ಅಡಿಯಲ್ಲಿ ವಿತರಣೆ ಮಾಡುವ ಅಕ್ಕಿಯಾಗಿತ್ತು ಎಂದು ಹೇಗೆ ತಿಳಿದುಬಂದಿತ್ತು ಎಂದರೆ ಸಾಕ್ಷಿಯು ಆ ಬಗ್ಗೆ ವಾಹನದಲ್ಲಿ ಇದ್ದ ಆರೋಪಿತ ಕುಮಾರ್ ರವರು ತಿಳಿಸಿದ್ದಾಗಿ ನುಡಿಯುತ್ತಾರೆ. ಸದರಿ ಅಕ್ಕಿ ಪಡಿತರ ಚೀಟಿ ಅಡಿಯಲ್ಲಿ ವಿತರಣೆ ಮಾಡುವ ಅಕ್ಕಿಯಾಗಿತ್ತೇ ಎಂಬ ಬಗ್ಗೆ ನಾನು ಪರೀಕ್ಷೆಗೆ ಒಳಪಡಿಸಿಲ್ಲ ಆ ಬಗ್ಗೆ

ತನಿಖಾಧಿಕಾರಿ ವಿಚಾರಣೆ ಮಾಡಿರುತ್ತಾರೆ. ಅಕ್ಕಿಯನ್ನು ರಾಸಾಯನಿಕ ಪರೀಕ್ಷೆ ಕಳುಹಿಸುವ ಸಲುವಾಗಿ ಅಕ್ಕಿಯ ಮಾದರಿಯನ್ನು ತೆಗೆದಿರುವುದಿಲ್ಲ. ನಮ್ಮ ಠಾಣಾ ವ್ಯಾಪ್ತಿಯಲ್ಲಿ ಪಡಿತರ ಚೀಟಿಯಡಿ ಸರಿಯಾಗಿ ಅಕ್ಕಿಯಾಗಿ ವಿತರಣೆ ಮಾಡುತ್ತಿಲ್ಲ ಎಂಬ ಬಗ್ಗೆ ದೂರು ದಾಖಲಾಗಿತ್ತೇ ಎಂಬ ಬಗ್ಗೆ ನನಗೆ ಈಗ ನೆನಪಿಲ್ಲ. ಅಕ್ಕಿಯನ್ನು ತುಂಬಿದ್ದರು ಎನ್ನಲಾದ ಪ್ಲಾಸ್ಟಿಕ್ ಚೀಲಗಳ ಮೇಲೆ ಒಂದೊಂದರಲ್ಲಿ ಒಂದೊಂದು ರೀತಿಯ ಹೆಸರು ಮತ್ತು ಚಿಹ್ನೆಗಳು ಇದ್ದವು. ಆ ಚೀಲಗಳ ಮೇಲೆ ನ್ಯಾಯಬೆಲೆ ಅಂಗಡಿಗೆ ವಿತರಣೆ ಮಾಡುವ ಸಂಬಂಧ ಸೀಲ್ ಅಥವಾ ಚಿಹ್ನೆ ಇರಲಿಲ್ಲ.

**3)** ಒಟ್ಟು **57** ಮೂಟೆಗಳು ಇತ್ತು ಎಂದು ತೋರಿಸಲು ಅವುಗಳ ಮೇಲೆ ಕ್ರಮ ಸಂಖ್ಯೆಗಳನ್ನು ಬರೆಯಲಿಲ್ಲ ಮತ್ತು ಭಾವಚಿತ್ರವನ್ನು ಸಹಾ ತೆಗೆದಿರುವುದಿಲ್ಲ. ವಾಹನದ ಹಿಂಬದಿಗೆ ಹಾಕಿದ್ದ ಟಾರ್ಪಲ್ ಗಾಡಿಗೆ ಲಗತ್ತಾಗಿದ್ದ ಕಾರಣ ಅದನ್ನು ಪ್ರತ್ಯೇಕವಾಗಿ ಜಪ್ತುಪಡಿಸಿರುವುದಿಲ್ಲ. ನಾನು ಹೇಳಿದಂತೆ ದಿ:**06.03.2022** ರಂದು ಚಾಸಾ-**8** ಮತ್ತು **9** ರವರ ಜೊತೆ ಯಾವುದೇ ಗಸ್ತು ಕಾರ್ಯಕ್ಕೆ ಹೋಗಿರಲಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ನಮಗೆ ಯಾವುದೇ ಬಾತ್ಮೀ ಬಂದಿರಲಿಲ್ಲ ಮತ್ತು ಯಾವುದೇ ಪಂಚರನ್ನು ಕರೆಸಿಲ್ಲ ಹಾಗೂ ಯಾವುದೇ ವಾಹನವನ್ನು ತಡೆಹಿಡಿದು ತಪಾಸಣೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ವಾಹನದಲ್ಲಿ ಇದ್ದ ಒಬ್ಬ ವ್ಯಕ್ತಿ ಓಡಿ ಹೋಗಿದ್ದು **4** ನೇ ಆರೋಪಿತನನ್ನು ವಿಚಾರಣೆ ಮಾಡಿದ್ದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಟಾಟಾ ಗೂಡ್ಸ ವಾಹನದಲ್ಲಿ ನಾನು ಹೇಳಿದಂತೆ ಯಾವುದೇ ಅಕ್ಕಿಯನ್ನು ಕಳ್ಳ ಸಾಗಾಣಿಕೆ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಸದರಿ ವಾಹನದಲ್ಲಿ **57** ಅಕ್ಕಿ ಮೂಟೆಗಳು ಇದ್ದ ಅವುಗಳನ್ನು ಪಂಚನಾಮೆಯಡಿ ಪಂಚರ ಸಮಕ್ಷಮ ಜಪ್ತುಪಡಿಸಿದ್ದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ವಾಹನದಲ್ಲಿ ಪಡಿತರ ಚೀಟಿಯಡಿ ವಿತರಣೆ ಮಾಡುವ ಅಕ್ಕಿಯಿದ್ದು ಅವುಗಳನ್ನು ಬಿಳಿ ಚೀಲದಲ್ಲಿ ಹಾಕಿ ತಂದಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಆರೋಪಿತರು ಯಾವುದೇ ತಪ್ಪು ಮಾಡಿಲ್ಲ ಆದರೂ ಸಹ ಠಾಣಾ ಅಂಕಿಸಂಖ್ಯೇಗೋಸ್ಕರ ಸುಳ್ಳು ದೂರು ದಾಖಲಿಸಿದ್ದೇನು ಎಂದರೆ ಸರಿಯಲ್ಲ.

**ಮರು ವಿಚಾರಣೆ:- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು)

ಓ.ಹೆ.ಕೆ.ಸರಿ ಇದೆ.

ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ.ದಂ.ಗಳು
ಚನ್ನಪಟ್ಟಣ